ಅಸಲು ದಾವಾ ನಂ :418 /2017
ಪಿ .ಡಬ್ಲ್ಯೂ : 02

(ಇಂದು ದಿನಾಂಕಃ **16-04-2022** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ- ಪ್ರತಿವಾದಿ ನಂ.17 ರಿಂದ 19 ಪರ ವಕೀಲರಾದ ಶ್ರೀ ಆರ್ ಎಲ್ ಪಿ ರವರಿಂದಃ-**

ಮೂಲಪುರುಷ ಲಕ್ಕಪ್ಪ ನವರಿಗೆ ಮೊದಲು ಎಷ್ಟು ಆಸ್ತಿ ಇತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳು ಎಲ್ಲೆಲ್ಲಿ ಇದ್ದವು ಎಂದು ನನಗೆ ನೆನಪಿಲ್ಲ. ಸದರಿ ಆಸ್ತಿಗಳನ್ನು ನಾನು ನೋಡಿರುವುದಿಲ್ಲ. ಅದೇ ರೀತಿ ಸತ್ಯಪ್ಪ ಮತ್ತು ಪರಸಪ್ಪರವರಿಗೆ ಎಷ್ಟು ಆಸ್ತಿಗಳು ಇದ್ದವು ಎಂದು ನನಗೆ ನೆನಪಿಲ್ಲ. ಸತ್ಯಪ್ಪರವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ನೆನಪಿಲ್ಲ. ಸತ್ಯಪ್ಪರವರಿಗೆ ಎಷ್ಟು ಜನ ಮಕ್ಕಳು ಎಂದು ದಾವೆಯಲ್ಲಿ ಬರೆಯಲಾಗಿರುತ್ತದೆ. ಸತ್ಯಪ್ಪರವರ ಮಕ್ಕಳ ಬಗ್ಗೆ ಬರೆಸಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪರಸಪ್ಪರವರಿಗೆ ಎಷ್ಟು ಜನ ಮಕ್ಕಳು ಇರುತಾತರೆ ಎನ್ನುವ ಬಗ್ಗೆ ದಾವೆಯಲ್ಲಿ ಬರೆಯಲಾಗಿರುತ್ತದೆ. ಸಕ್ರಪ್ಪರವರಿಗೆ ಎಷ್ಟು ಜನ ಮಕ್ಕಳು ಇರುತ್ತಾರೆಂದು ಬರೆಸಿರುವುದಿಲ್ಲ. ಮತ್ತು ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಬುದ್ದಿವಂತರವರಿಗೆ ಶ್ಯಾಮ, ಲಕ್ಷ್ಮಣ, ರಾಮ, ಮತ್ತು ಸದಾಶಿವ ಎನ್ನುವ ಮಕ್ಕಳು ಇರುತ್ತಾರೆ. ದಾವೆ ಮತ್ತು ಸಾಕ್ಷಿಪ್ರಮಾಣಪತ್ರದಲ್ಲಿ ಇಷ್ಟೇ ಮಕ್ಕಳು ಇರುತ್ತಾರೆಂದು ಬರೆಸಿರುತ್ತೇನೆ. ಈ ಬಗ್ಗೆ ದಾವೆಯಲ್ಲಿ ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ರಾಮು, ಸದಾಶಿವ ಮತ್ತು ಶ್ಯಾಮುರವರು ಎಲ್ಲಿ ತೀರಿಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ, ಶ್ಯಾಮು ಸದಾಶಿವ, ಲಕ್ಷ್ಮಣ

ಮತ್ತು ರಾಮುರವರು ರಡ್ಡೆರಟ್ಟಿಯಲ್ಲಿ ಇರುತ್ತಿದ್ದರು. ಸದರಿಯವರು ರಡ್ಡೆರಟ್ಟಿಯಲ್ಲಿ ವಾಸವಿದ್ದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಶಾಮುರವರಿಗೆ ಎಷ್ಟು ಜನ ಹೆಣ್ಣು ಮ್ಕಳೆಂದು ಗೊತ್ತಿಲ್ಲ ಆದರೆ ಗಂಡುಮಕ್ಕಳ ಬಗ್ಗೆ ನನಗೆ ತಿಳಿದಿರುತ್ತದೆ. ಸದಾಶಿವರವರಿಗೆ ಎಷ್ಟು ಜನ ಹೆಣ್ಣು ಮಕ್ಕಳು ಮತ್ತು ಗಂಡುಮಕ್ಕಳು ಎಂದು ನನಗೆ ನೆನಪಿಲ್ಲ. ಸದಾಶಿವರವರಿಗೆ ಮಕ್ಕಳು ಇರುತ್ತಾರೆ. ಸದಾಶಿವರವರಿಗೆ ಮಕ್ಕಳು ಇರುವ ಬಗ್ಗೆ ದಾವೆಯಲ್ಲಿ ತೋರಿಸಿರುವುದಿಲ್ಲ. ಲಕ್ಷ್ಮಣರವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ವಂಶಾವಳಿ ದಾವೆಯಲ್ಲಿ ತೋರಿಸಿದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಯನ್ನು ತಲಾಟಿರವರು ನೀಡಿರುತ್ತಾರೆ. ಲಕ್ಕಪ್ಪರವರ ವಂಶಾವಳಿಯ ಬಗ್ಗೆ ದಾಖಲೆಯನ್ನು ತಲಾಟಿರವರು ನೀಡಿದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಮುರವರಿಗೆ ಇಬ್ಬರು ಗಂಡುಮಕ್ಕಳು ಒಂದು ಹೆಣ್ಣುಮಗು ಇರುತ್ತಾರೆ. ರಾಮುರವರ ಹೆಂಡತಿ ಹೆಸರು ರತ್ನಮ್ಮ. ಸದರಿ ರತ್ನಮ್ಮ ಈಗ ತೀರಿಕೊಂಡಿರುತ್ತಾರೆ. ಸದರಿ ರತ್ನಮ್ಮ ಯಾವಾಗ ಮತ್ತು ಎಷ್ಟನೇ ಇಸವಿಯಲ್ಲಿ ತೀರಿಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ. ರಾಮುರವರ ಹೆಂಡತಿ ಮತ್ತು ಮಕ್ಕಳ ಬಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಯನ್ನು ತಲಾಟಿರವರು ನೀಡಿರುತ್ತಾರೆ. ತಲಾಟಿರವರು ರಾಮುರವರ ವಾರಸುದಾರರ ಬಗ್ಗೆ ನೀಡಿದ ದಾಖಲೆ ಇರುತ್ತದೆ. ತಲಾಟಿರವರು ರಾಮುರವರ ವಾರಸುದಾರರಬಗ್ಗೆ ನೀಡಿದ ದಾಖಲೆಯನ್ನು ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲಕ್ಕಪ್ಪರವರ ಮಕ್ಕಳಾದ ಸತ್ಯಪ್ಪ

ಮತ್ತು ಪರಸಪ್ಪ ಯಾವಾಗ ಪಾಲುಮಾಡಿಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಪರಸಪ್ಪರವರ ಮಕ್ಕಳು ಯಾವಾಗ ಪಾಲುಮಾಡಿಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಬುದ್ದಿವಂತರವರ ಮಕ್ಕಳು ಯಾವಾಗ ಪಾಲುಮಾಡಿಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ವಂಶಾವಳಿಯಲ್ಲಿ ತೋರಿಸಿರುವವರು ಯಾವಾಗ ಪಾಲುಮಾಡಿಕೊಂಡಿದ್ದಾರೆ ಎಂದು ನನಗೆ ನೆನಪಿಲ್ಲ. ಅ.ದಾ.ನಂ.330/2000 ರಲ್ಲಿ ಏನು ಆದೇಶ ಆಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ದಾವೆ ಯಾರ ಯಾರ ನಡುವೆ ನಡೆದಿರುತ್ತದೆ ಎಂದು ನನಗೆ ನೆನಪಿಲ್ಲ. ಸದರಿ ದಾವೆಯ ಬಗ್ಗೆ ನನಗೆ ನೆನಪಿಲ್ಲ ಎಂದು ಪ್ರಮಾಣಪತ್ರದಲ್ಲಿ ಬರೆಸಿರುವುದಿಲ್ಲ. ಸದರಿ ದಾವೆಯನ್ನು ಯಾವ ಪರಿಹಾರ ಕೋರಿ ದಾಖಲಿಸಿದ್ದರು ಎಂದು ನನಗೆ ನೆನಪಿಲ್ಲ. ಸದರಿ ದಾವೆ ಯಾವ ದಿನಾಂಕದಂದು ಆದೇಶ ಆಗಿರುತ್ತದೆಂದು ನನಗೆ ನೆನಪಿಲ್ಲ. ಸದರಿ ದಾವೆಯ ಪ್ರಕಾರ ಯಾರಿಗೆ ಆಸ್ತಿ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ದಾವೆಯ ಆದೇಶದ ಪ್ರಕಾರ ಉತಾರ ಯಾರ ಹೆಸರಲ್ಲಿ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಆದರೆ ಸದರಿ ದಾವೆ ಖೊಟ್ಟಿಯಾಗಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಅ.ದಾ.ನಂ.330/2000 ಖೊಟ್ಟಿಯಾಗಿರುತ್ತದೆಂದು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿರುತ್ತೇನೆ. ಸದರಿ ಮೇಲ್ಮನವಿ ನಂಬರ ನನಗೆ ನೆನಪಿಲ್ಲ. ಸದರಿ ಮೆಲ್ಮನವಿಯಲ್ಲಿ ಏನು ಆದೇಶವಾಗಿದೆ ಎಂದು ನನಗೆ ನೆನಪಿಲ್ಲ. ಸದರಿ ಮೇಲ್ಮನವಿಯನ್ನು 10 ವರ್ಷಗಳ ಹಿಂದೆ ಯಾರ ಮುಂದೆ ಸಲ್ಲಿಸಿರುತ್ತೇನೆಂದು ನನಗೆ ನೆನಪಿಲ್ಲ. ಕಳೆದ 4 ವರ್ಷಗಳ ಹಿಂದೆ ಅ.ದಾ.ನಂ.330/2000 ರಲ್ಲಿ ಆದೇಶ ಆದ ಬಗ್ಗೆ ನನಗೆ ತಿಳಿದುಬಂದಿರುತ್ತದೆ. ಆ ಬಗ್ಗೆ ದಾವೆ ಮತ್ತು

ಸಾಕ್ಷಿಪ್ರಮಾಣಪತ್ರದಲ್ಲಿ ಬರೆಸಿರುವುದಿಲ್ಲ. ಈ ದಾವೆಯಲ್ಲಿ ನಮಗೆ ಆಸ್ತಿ ಬರಬೇಕೆಂದು ಪ್ರಾರ್ಥನೆ ಮಾಡಿಕೊಂಡಿರುತ್ತೇನೆ. ಬೇರೆ ಏನು ಪ್ರಾರ್ಥನೆ ಕೇಳಿರುತ್ತೇನೆಂದು ನನಗೆ ಈಗ ನೆನಪಿಲ್ಲ. 2017 ರಲ್ಲಿ ಪ್ರತಿ ಎಕರೆಗೆ ಎಷ್ಟು ಕಿಮ್ಮತ್ತು ಇತ್ತು ಎಂದು ನನಗೆ ನೆನಪಿಲ್ಲ. ಈ ದಾವೆಯಲ್ಲಿ ಎಷ್ಟು ಕಿಮ್ಮತ್ತು ತೋರಿಸಿರುತ್ತೇವೆಂದು ನನಗೆ ನೆನಪಿಲ್ಲ. ಸ.ನಂ.489/2 ಆಸ್ತಿಯ ಸಧ್ಯ ಪೂರ್ವಕ್ಕೆ ಕೊನ್ನೂರ, ಪಶ್ಚಿಮಕ್ಕೆ ಹುಲಿಯಾಳ, ಉತ್ತರಕ್ಕೆ ಖೋತಣ್ಣನವರು, ದಕ್ಷಿಣಕ್ಕೆ ಸವದಿ ಹಾದಿ ಇರುತ್ತದೆ. ಕೊನ್ನೂರು ಮತ್ತು ಖೋತರವರು ಹಿಂದಿನವರ ಹೆಸರು ನನಗೆ ನೆನಪಿಲ್ಲ. 2017 ರಲ್ಲಿ ದಾವೆ ಮಾಡುವ ಸಮಯದಲ್ಲಿ 12 ಎಕರೆ ಉತಾರನಲ್ಲಿ ಇರುವ ವ್ಯಕ್ತಿಗಳನ್ನು ಪಕ್ಷಗಾರರನ್ನಾಗಿ ಮಾಡಿರುತ್ತೀರಾ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸ.ನಂ. 489/5 ಎ 6 ಎಕರೆ ವಿಸ್ತೀರ್ಣದ ಚಕಬಂದಿಯು ಈ ಮೇಲೆ ಹೇಳಿದ ಸ.ನಂ.489/2 ರ ಚಕಬಂದಿ ಆಗಿರುತ್ತದೆ. ಈ ಬಗ್ಗೆ ಚಕಬಂದಿ ಇಲ್ಲದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಆಸ್ತಿಗೆ ಸಂಬಂದಿಸಿದಂತೆ 2017 ರಲ್ಲಿ ಯಾರ ಹೆಸರಿನಲ್ಲಿ ಉತಾರ ಇತ್ತು ಎಂದು ನನಗೆ ನೆನಪಿಲ್ಲ. ಇವತ್ತಿನವರೆಗೆ ಸದರಿ ದಾವಾಆಸ್ತಿ ಯಾರ ಹೆಸರಿನಲ್ಲಿ ಉತಾರ ಇರುತ್ತದೆ ಎಂದು ನನಗೆ ನೆನಪಿಲ್ಲ. ಈಗಲೂ ಸಹ ನಾನು ಸದರಿ ಆಸ್ತಿಯ ಉತಾರನ್ನು ನೋಡಿರುವುದಿಲ್ಲ. 2017 ರ ಉತಾರನ್ನು ಸಹ ನೋಡಿರುವುದಿಲ್ಲ. ದಾವಾಆಸ್ತಿಗೆ ಸಂಬಂದಿಸಿದಂತೆ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಚಿಕ್ಕೋಡಿಯಲ್ಲಿ ಆರ್ ಎ ನಂ. 125/16 ಇತ್ಯರ್ಥಕ್ಕೆ ಬಾಕಿ ಇರುವ ವಿಚಾರ ನನಗೆ ನೆನಪಿಲ್ಲ. 17 ರಿಂದ 19 ನೇ ಪ್ರತಿವಾದಿಯರು ತಮ್ಮ ತಕರಾರಿನಲ್ಲಿ ಏನು ಬರೆದಿರುತ್ತಾರೆಂದು ನನಗೆ ನೆನಪಿಲ್ಲ.

ಸದರಿಯರು ಸಲ್ಲಿಸಿರುವ ಪ್ರತಿವಾದ ಪತ್ರವನ್ನು ನಾನು ಓದಿರುವುದಿಲ್ಲ. ಸದರಿ ಪ್ರತಿವಾದಿ ನಂ.17 ರಿಂದ 19 ರವರು ದಿ.23-09-2005 ರಂದು ಎಷ್ಟು ಹಣ ನೀಡಿ ಆಸ್ತಿ ಖರೀದಿಸಿರುತ್ತಾರೆಂದು ನನಗೆ ನೆನಪಿಲ್ಲ. ಸದರಿ ಪ್ರತಿವಾದಿ ನಂ.17 ರಿಂದ 19 ರವರು ದಿ.23-09-2005 ರಂದು ಎಷ್ಟು ಹಣ ನೀಡಿ ಆಸ್ತಿ ಖರೀದಿಸಿರುತ್ತಾರೆಂದು ಈ ದಾವೆಯಲ್ಲಿ ನಾನು ಬರೆಸಿರುತ್ತೇನೆ. ಪ್ರತಿವಾದಿ ನಂ.17 ರಿಂದ 19 ದಾವಾಆಸ್ತಿಯಲ್ಲಿ ಏನು ಬೆಳೆ ಬೆಳೆಯುತ್ತಿದ್ದಾರೆಂದು ಬರೆಸಿರುವುದಿಲ್ಲ. ಪ್ರತಿವಾದಿ ನಂ.17 ರಿಂದ 19 ರವರು ದಾವಾಆಸ್ತಿ ಮೇಲೆ ಸಾಲ ತೆಗೆದಿರುವುದಿಲ್ಲ. ಸದರಿ ಪ್ರತಿವಾದಿ ನಂ.17 ರಿಂದ 19 ರವರು ದಾವಾಆಸ್ತಿ ಯಲ್ಲಿ 2 ಬೋರವೆಲ್ಗಳನ್ನು ಹಾಕಿಸಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.17 ರಿಂದ 19 ರವರು ದಾವಾಆಸ್ತಿ ಯಲ್ಲಿ 200*200 ಅಡಿ ಅಳತೆಯ ಹೊಂಡ ತೆಗೆಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹೊಂಡದಲ್ಲಿ ಈಗ ಮೀನು ಸಾಕಾಣಿಕೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.17 ರಿಂದ 19 ರವರು ದಾವಾಆಸ್ತಿಯನ್ನು ಖರೀದಿಸಿದ ವಿಚಾರ ಯಾವಾಗ ತಿಳಿಯಿತು ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸದರಿ ಪ್ರತಿವಾದಿಯರು ಖರೀದಿ ಮಾಡಿದ ಬಗ್ಗೆ ದಾವೆಯಲ್ಲಿ ಬರೆಸಿರುವುದಿಲ್ಲ. ಸದರಿ ಪ್ರತಿವಾದಿ ನಂ.17 ರಿಂದ 19 ರವರನ್ನು ಈ ದಾವೆಯಲ್ಲಿ ಯಾವ ಕಾರಣಕ್ಕಾಗಿ ಪಕ್ಷಗರರನ್ನಾಗಿ ಮಾಡಿರುತ್ತೇನೆಂದು ಈಗ ನನಗೆ ನೆನಪಿಲ್ಲ. 2005 ರಲ್ಲಿ ಅಪ್ಪಾಸಾಬ ದುಬರೆರವರ ಹೆಸರಿನಲ್ಲಿ ಉತಾರ ಇತ್ತು. ಸದರಿ ಅಪ್ಪಾಸಾಬ ಲಕ್ಷ್ಮಣ ದುಬರೆರವರು ಪ್ರತಿವಾದಿ ನಂ.17 ರಿಂದ 19 ರವರಿಗೆ ಮಾರಾಟ ಮಾಡಿರುತ್ತಾರೆಂದರೆ ಸಾಕ್ಷಿ ಅದು ಖೊಟ್ಟಿ ಇರುತ್ತದೆಂದು ನುಡಿಯುತ್ತಾರೆ. ಸದರಿ ಖರೀದಿ ಖೊಟ್ಟಿ ಇರುತ್ತದೆಂದು ದಾವೆ ಮಾಡಿರುವುದಿಲ್ಲ.

ಪ್ರತಿವಾದಿ ನಂ.17 ರಿಂದ 19 ರವರು ಆಸ್ತಿಯನ್ನು ಖರೀದಿಸಿದ 4-5 ವರ್ಷಗಳ ನಂತರ ಸದರಿ ಖರೀದಿ ಖೊಟ್ಟಿ ಇರುತ್ತದೆಂದು ನನಗೆ ತಿಳಿದುಬಂದಿರುತ್ತದೆ. ಸದರಿ ಖರೀದಿ ಸಮಯದಲ್ಲಿ ಅಪ್ಪಾಸಾಬ ರವರು ಒಬ್ಬರೇ ಹೋಗಿದ್ದರು. ಆ ಬಗ್ಗೆ ಅಪ್ಪಾಸಾಬ ರವರ ಮನೆಯವರು ನನಗೆ ಹೇಳಿರುತ್ತಾರೆ. ಸದರಿ ಖರೀದಿ ಆದ 4-5 ವರ್ಷಗಳ ನಂತರ ಅವರ ಮನೆಯವರು ನನಗೆ ಹೇಳಿರುತ್ತಾರೆ. ಪ್ರತಿವಾದಿ ನಂ.17 ರಿಂದ 19 ರವರು ದಾವಾಆಸ್ತಿ ಖರೀದಿಸಿದ ನಂತರ ಸದರಿ ಖರೀದಿಪತ್ರದ ಪ್ರಕಾರ ಅವರ ಹೆಸರುಗಳು ಉತಾರನಲ್ಲಿ ದಾಖಲಾಗಿರುತ್ತವೆ. ಅಪ್ಪಾಸಾಬರವರು ದಾವಾಆಸ್ತಿಗೆ ಯೋಗ್ಯ ಬೆಲೆ ಬಂದಿದ್ದರಿಂದ ಖರೀದಿಗೆ ಕೊಟ್ಟಿರುತ್ತಾರೆ. ಸದರಿ ಖರೀದಿಪತ್ರದ ಪ್ರಕಾರ ಅಪ್ಪಾಸಾಬರವರು ದಾವಾಆಸ್ತಿಯ ಕಬ್ಜಾ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅಪ್ಪಾ ಸಾಬ ಮತ್ತು ಅವರ ಕುಟುಂಬದವರು ದಾವಾಆಸ್ತಿಯ ಕಬ್ಜಾ ಕೊಟ್ಟ ದಿನಾಂಕದಿಂದ ಇಲ್ಲಿಯವರೆಗೆ ಕಬ್ಜಾದಲ್ಲೇ ಇರುತ್ತಾರೆ ಎಂದರೆ ಸಾಕ್ಷಿ ಅಪ್ಪಾಸಾಬ ಒಬ್ಬರೇ ಕಬ್ಜಾ ಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ಸದರಿ ಪ್ರತಿವಾದಿ ನಂ.17 ರಿಂದ 19 ರವರು ದಾವಾಆಸ್ತಿ ಯಲ್ಲಿ ಬೆಳೆದ ಕಬ್ಬನ್ನು ಸಕ್ಕರೆ ಕಾರ್ಖಾನೆಗೆ ಕಳಿಸುತ್ತಾರೆ ಎಂದರೆ ಸರಿಯಲ್ಲ. ದಾವಾಆಸ್ತಿಯಲ್ಲಿ ಪ್ರತಿವಾದಿ ನಂ.17 ರಿಂದ 19 ರವರು ಕಬ್ಬಿಣ ಬೆಳೆ ಮತ್ತು ಸೂರ್ಯಕಾಂತಿ ಬೆಳೆ ಬೆಳೆಯುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.17 ರಿಂದ 19 ರವರು ದಾವಾಆಸ್ತಿಯಲ್ಲಿ ಬೆಳೆದ ಕಬ್ಬನ್ನು ಎಲ್ಲಿಗೆ ಕಳಿಸುತ್ತಾರೆಂದು ನನಗೆ ಮಾಹಿತಿ ಇಲ್ಲ. ದಾವಾಆಸ್ತಿಯಲ್ಲಿರುವ ಬೋರವೆಲ ಗಳು ಯಾರ ಹೆಸರಿನಲ್ಲಿ ಪರ್ಮಿಷನ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಅಪ್ಪಾಸಾಬರವರ ಹೆಸರಿನಲ್ಲಿ ದಾವಾಆಸ್ತಿಗೆ ಸಂಬಂದಿಸಿದಂತೆ ಆದ ಡೈರಿ ನಂಬರ ನನಗೆ ನೆನಪಿಲ್ಲ.

ಅಸಲು ದಾವಾ ನಂ :418 /2017
ಪಿ .ಡಬ್ಲ್ಯೂ : 02

ದಾವಾಆಸ್ತಿಗೆ ಸಂಬಂದಿಸಿದಂತೆ ಅಪ್ಪಾಸಾಬರವರ ಹೆಸರಿನಲ್ಲಿ ಅ.ದಾ.ನಂ.330/2000 ರಲ್ಲಿ ಆದ ಅಪಸಾತ ಡಿಕ್ರಿ ಪ್ರಕಾರ ಡೈರಿ ಆದ ವಿಚಾರ ನನಗೆ ನೆನಪಿಲ್ಲ.

(ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ನಂ.17 ರಿಂದ 19 ರವರ ಪರ ವಕೀಲರು ಸಮಯಾವಕಾಶ ಕೊರಿರುತ್ತಾರೆ, ನೀಡಲಾಯಿತು.)

(ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ. ಇದೆ

(ನಾಗೇಂದ್ರ)
3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ. ಎಂ. ಎಫ್. ಸಿ. ನ್ಯಾಯಾಲಯ ಅಥಣಿ.